RNU AIR DHARWAD

# JUNE 21, 2024

## AKASHAVANI - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಅಂತಾರಾಷ್ಟ್ರೀಯ ಯೋಗ ದಿನದ ಹಾರ್ದಿಕ ಶುಭಾಶಯಗಳು**

<><><>

**ಮುಖ್ಯಾಂಶಗಳು:**

<><><>

- ‘ಸ್ವಂತಕ್ಕಾಗಿ ಹಾಗೂ ಸಮಾಜಕ್ಕಾಗಿ ಯೋಗ’ ಎಂಬ ಧ್ಯೇಯದಡಿ, 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ.
- ತುಂಗಭದ್ರಾ ಜಲಾಶಯದ ಹೂಳಿನ ಸಮಸ್ಯೆ ಪರಿಹರಿಸಲು, ಆಂಧ್ರ ಮತ್ತು ತಮಿಳುನಾಡು ಮುಖ್ಯಮಂತ್ರಿಗಳ ಜೊತೆ, ಚರ್ಚೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಪರಿಶಿಷ್ಟ ಸಮುದಾಯಗಳ ಹಕ್ಕು ರಕ್ಷಣೆಗಾಗಿ, 33 ವಿಶೇಷ ಪೊಲೀಸ್ ಠಾಣೆಗಳು ಅಸ್ತಿತ್ವಕ್ಕೆ – ಸಚಿವ ಎಚ್.ಕೆ.ಪಾಟೀಲ.
- ಮಹಿಳೆ ಮತ್ತು ಮಕ್ಕಳ ಸುರಕ್ಷತೆ; ವಿ.ಎಲ್.ಟಿ. ಉಪಕರಣ ಮತ್ತು ಪ್ಯಾನಿಕ್ ಬಟನ್ ಅಳವಡಿಕೆಗೆ, ಅಂತಿಮ ದಿನಾಂಕ ನವೆಂಬರ್ 10.

<><><>

**ಈಗ ವಾರ್ತೆಗಳ ವಿವರ**

<><><>

ಯುವ ಮನಸ್ಸುಗಳು ಮತ್ತು ದೇಹದ ಮೇಲೆ, ಯೋಗದ ಗಾಢವಾದ ಪ್ರಭಾವವನ್ನು, ಈ ಬಾರಿಯ ಯೋಗ ದಿನಾಚರಣೆ ಒತ್ತಿ ಹೇಳುತ್ತದೆ. ಯೋಗಾಭ್ಯಾಸದ ಮೂಲಕ, ಸಾವಿರಾರು ಜನರನ್ನು ಒಂದುಗೂಡಿಸುವ ಹಾಗೂ ಜಾಗತಿಕ ಮಟ್ಟದಲ್ಲಿ, ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ಉತ್ತೇಜಿಸುವ ಗುರಿ, ಹೊಂದಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು.

ಶ್ರೀನಗರದ 'ಶೇರ್–ಎ–ಕಾಶ್ಮೀರ್ ಇಂಟರ್ನ್ಯಾ ’ನಲ್ ಕಾನ್ಫರೆನ್ಸ್ ಸೆಂಟರ್'ನಲ್ಲಿ, ಈ ಬೆಳಗ್ಗೆ ಯೋಗ ದಿನಾಚರಣೆಯಲ್ಲಿ, ಪಾಲ್ಗೊಂಡು ಅವರು ಮಾತನಾಡಿದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಳ್ಳಾರಿ ಜಿಲ್ಲೆಯ, ತೋರಣಗಲ್ಲಿನ ಜಿಂದಾಲ್ ಟೌನ್‌ಶಿಪ್‌ನಲ್ಲಿ, ಈ ಬೆಳಗ್ಗೆ 7 ಗಂಟೆಗೆ ಆರಂಭವಾದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

<><><>

ಇಂದು, 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ. 'ಸ್ವಂತಕ್ಕಾಗಿ ಹಾಗೂ ಸಮಾಜಕ್ಕಾಗಿ ಯೋಗ' ಎಂಬ, ವಿಶ್ವಸಂಸ್ಥೆ ಘೋಷಿತ ಧ್ಯೇಯದಡಿ, ಯೋಗ ದಿನವನ್ನು ಈ ಬೆಳಗ್ಗೆ ಜಗತ್ತಿನಾದ್ಯಂತ ಆಚರಿಸಲಾಯಿತು.

<><><>

ಕರ್ನಾಟಕ ಸರ್ಕಾರದ, ಆಯುಷ್ ಮಂತ್ರಾಲಯ, ಕಳೆದ 10 ರಿಂದ 20ನೇ ತಾರೀಖಿನ ವರೆಗೆ, 10 ದಿನಗಳ ಯೋಗೋತ್ಸವವನ್ನು, 'ಮಹಿಳಾ ಸಬಲೀಕರಣಕ್ಕಾಗಿ ಯೋಗ' ಎಂಬ ವಿಶೇಷ ಧ್ಯೇಯದೊಂದಿಗೆ ಆಚರಿಸಿತು.

<><><>

2014 ರ ಡಿಸೆಂಬರ್ 10 ರಂದು, ಭಾರತದ ನೇತೃತ್ವದಲ್ಲಿ, ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ, ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು, ಅಧಿಕೃತವಾಗಿ ಘೋಷಿಸಿತು.

<><><>

ಇಂದು ಶುಕ್ರವಾರ ಜೂನ್ 21, ಬೇಸಿಗೆಯ ಅಯನ ಸಂಕ್ರಾಂತಿ. ಉತ್ತರ ಗೋಳಾರ್ಧದಲ್ಲಿ ಗ್ರಹದ ಅಕ್ಷದ ಓರೆ, ಅದು ಸುತ್ತುವ ನಕ್ಷತ್ರದ ಕಡೆಗೆ ಹೆಚ್ಚು ಒಲವನ್ನು ಹೊಂದಿದ ದಿನ. ಇಂದು ಸೂರ್ಯ ಬೇಗ ಉದಯಿಸುತ್ತಾನೆ ಮತ್ತು ಉತ್ತರ ಗೋಳಾರ್ಧದಲ್ಲಿ ತಡವಾಗಿ ಅಸ್ತಮಿಸುತ್ತಾನೆ. ಯೋಗ ವಿಜ್ಞಾನದ ಪ್ರಾರಂಭದ ದಿನವೆಂದು ಪರಿಗಣಿಸಲಾಗಿದೆ. ಶಾಂತಿಯುತ, ಆರೋಗ್ಯಕರ ಮತ್ತು ಸಂತೋ ’ದ ಜೀವನಕ್ಕೆ ಆಧಾರವಾಗಿ, ಯೋಗ ಜಾಗತಿಕ ಸಮುದಾಯದಲ್ಲಿ ಇಂದಿಗೆ, ಚಿರಪರಿಚಿತವಾಗಿದೆ. ಸುಮಾರು 5 ಸಾವಿರ ವ ’ಗಳ ’ಟ್ಟ ಹಳೆಯದಾದ ಭಾರತೀಯ ಯೋಗ ಪದ್ಧತಿ, ಮನಸ್ಸು, ದೇಹ ಮತ್ತು ಆತ್ಮವನ್ನು ಪರಿವರ್ತಿಸುವ ಗುರಿ ಹೊಂದಿದೆ.

<><><>

ಉತ್ತರಕನ್ನಡ ಜಿಲ್ಲೆ, ದಾಂಡೇಲಿ ಬಳಿ, ಕುಳಗಿ ಗ್ರಾಮದ ವನವಾಸಿ ಸಮುದಾಯದ ಪ್ರಥಮ ಯೋಗ ಗುರು, ಲಕ್ಷ್ಮಣ ಬೋಡಕೆ ಅವರು, ಕಳೆದ ಎರಡು ದಶಕಗಳಿಂದ ಯೋಗ ತರಬೇತಿ ಹಾಗೂ ಚಿಕಿತ್ಸೆಯಲ್ಲಿ ತೊಡಗಿದ್ದಾರೆ. ಯೋಗಮಯಂ ಯೋಗ ಸಾಧನಾ ಕೇಂದ್ರ ಸ್ಥಾಪಿಸಿ, ಕಳೆದ 7 ವರ್ಷಗಳಿಂದ, ಧಾರವಾಡದಲ್ಲಿ ನಿತ್ಯ ಯೋಗ ತರಬೇತಿ ವರ್ಗಗಳನ್ನು ಸಾರ್ವಜನಿಕರಿಗಾಗಿ ನಡೆಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಲಕ್ಷ್ಮಣ ಬೋಡಕೆ ಅವರು, ಯೋಗದ ಮಹತ್ವ ವಿವರಿಸಿದ್ದಾರೆ.

<><><>

ಯೋಗ ಗುರು ಲಕ್ಷ್ಮಣ ಬೋಡಕೆ ಧ್ವನಿ 34 ಸೆಕೆಂಡುಗಳು

<><><>

ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ತಾಲೂಕು ಬಾಳೆಹೊನ್ನೂರಿನ ರಂಭಾಪುರಿ ಪೀಠದ ಡಾಕ್ಟರ್ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು, ನುರಿತ ಯೋಗ ಸಾಧಕರು. ದೈನಂದಿನ ಜೀವನದಲ್ಲಿ ಯೋಗ ಸಾಧನೆ ಅವಶ್ಯಕತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ವೀರಸೋಮೇಶ್ವರ ಶಿವಾಚಾರ್ಯ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ತುಂಗಭದ್ರಾ ಜಲಾಶಯದ ಹೂಳಿನ ಸಮಸ್ಯೆ ಪರಿಹರಿಸಲು, ಗಂಗಾವತಿ ತಾಲೂಕಿನ ನವಲಿ ಬಳಿ, ಸಮಾನಾಂತರ ಜಲಾಶಯ ನಿರ್ಮಿಸಲು ಉದ್ದೇಶಿಸಲಾಗಿದೆ. ಸದ್ಯದಲ್ಲೇ ಆಂಧ್ರ ಮತ್ತು ತಮಿಳುನಾಡು ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ, ಮಾತುಕತೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬಳ್ಳಾರಿ ಜಿಲ್ಲೆ ತೋರಣಗಲ್ಲಿನ, ಜಿಂದಾಲ್ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಬಜೆಟ್‌ನಲ್ಲಿ ಘೋಷಿಸಿದಂತೆ, ಡಿ.ಪಿ.ಆರ್. ಸಿದ್ಧಪಡಿಸುವ ಕಾರ್ಯ ನಡೆದಿದೆ ಎಂದರು. ಸಂಡೂರಿನ ದೇವದಾರಿಯಲ್ಲಿ, ಕೆ.ಐ.ಓ.ಸಿ.ಎಲ್ ಕುದುರೆಮುಖ ಕಂಪೆನಿಗೆ ಗಣಿಗಾರಿಕೆ ನಡೆಸಲು ಅನುಮತಿ ನೀಡಿದ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೊಡನೆ ಸಮಾಲೋಚಿಸುವುದಾಗಿ, ಮುಖ್ಯಮಂತ್ರಿ ಹೇಳಿದರು.

<><><>

ಭದ್ರಾ ಮೇಲ್ದಂಡೆ ಯೋಜನೆಗಾಗಿ, ಕೇಂದ್ರ ಸರ್ಕಾರ ಕಳೆದ ಬಜೆಟ್‌ನಲ್ಲಿ ಘೋಷಿಸಿದ, 5 ಸಾವಿರದ 300 ಕೋಟಿ ರೂಪಾಯಿ, ಅನುದಾನ ಪಡೆಯಲು, ಕ್ರಮ ಕೈಗೊಳ್ಳುವುದಾಗಿ, ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ.

<><><>

ಹಾವೇರಿ ಜಿಲ್ಲೆ ಹಿರೇಕೆರೂರು, ಸರ್ವಜ್ಞ ಏತ ನೀರಾವರಿ ಯೋಜನೆ ಕಾಮಗಾರಿ, ಕಾಲಮಿತಿಯಲ್ಲಿ ಪೂರ್ಣಗೊಳಿಸಲು, ಉಪಮುಖ್ಯಮಂತ್ರಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರಿಗೆ, ಬಿ.ಸಿ. ಪಾಟೀಲ ಪತ್ರ ಬರೆದು, ಆಗ್ರಹಿಸಿದ್ದಾರೆ.

<><><>

ಪರಿಶಿಷ್ಟ ಸಮುದಾಯಗಳ ಹಕ್ಕುಗಳ ರಕ್ಷಣೆಗಾಗಿ, ಸ್ಥಾಪನೆಗೊಂಡಿರುವ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ, 33 ಘಟಕಗಳನ್ನು, ವಿಶೇಷ ಪೊಲೀಸ್ ಠಾಣೆಗಳನ್ನಾಗಿ ಘೋಷಿಸಲು, ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ ಎಂದು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ.ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿ ಜಿಲ್ಲೆಗೆ ಒಂದರಂತೆ ಹಾಗೂ ಬೆಂಗಳೂರಿನಲ್ಲಿ ಎರಡು ಠಾಣೆಗಳನ್ನು ತೆರೆಯಲಾಗುವುದು ಎಂದು, ಸಚಿವರು ಮಾಹಿತಿ ನೀಡಿದರು.

ವಿಧಾನಮಂಡಲದ ಉಭಯ ಸದನಗಳ ಅಧಿವೇಶನವನ್ನು ಸದ್ಯದಲ್ಲೇ ನಡೆಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. ಸದ್ಯಕ್ಕೆ ಎರಡು ವಾರ ಕಾಲ ಅಧಿವೇಶನ ನಡೆಸಬೇಕೆಂಬ ಚಿಂತನೆ ಇದೆ ಎಂದು, ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

<><><>

‘ಪ್ರಧಾನಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ’ ಯೋಜನೆಯನ್ನು, ರಾಜ್ಯದ 6 ವಿಶ್ವವಿದ್ಯಾಲಯಗಳಲ್ಲಿ, 279 ಕೋಟಿ 77 ಲಕ್ಷ ರೂಪಾಯಿ ವೆಚ್ಚದಲ್ಲಿ, ಅನುಷ್ಠಾನಗೊಳಿಸಲು, ಸಂಪುಟ ಅನುಮೋದನೆ ನೀಡಿದೆ.

<><><>

ರಾಜ್ಯದ ಎಲ್ಲ ಸರ್ಕಾರಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ, 29 ಕೋಟಿ ರೂಪಾಯಿ ವೆಚ್ಚದಲ್ಲಿ, ಉಚಿತ ವಿದ್ಯುತ್ ಹಾಗೂ ನೀರಿನ ಸೌಲಭ್ಯ ಒದಗಿಸುವ ಯೋಜನೆಗೆ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

<><><>

ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ದೃಷ್ಟಿಯಿಂದ, ಸಾರ್ವಜನಿಕ ಸೇವಾ ವಾಹನಗಳಲ್ಲಿ, ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ – ವಿ.ಎಲ್.ಟಿ. ಉಪಕರಣ ಮತ್ತು ತುರ್ತು ಪ್ಯಾನಿಕ್ ಬಟನ್ ಅಳವಡಿಕೆಯನ್ನು, ಸಾರಿಗೆ ಇಲಾಖೆ ಕಡ್ಡಾಯಗೊಳಿಸಿದೆ. ಹಳದಿ ನಂಬರ್ ಪ್ಲೇಟ್‌ನ ಟ್ಯಾಕ್ಸಿ, ಕ್ಯಾಬ್, ಖಾಸಗಿ ಬಸ್, ರಾಷ್ಟ್ರೀಯ ಪರವಾನಗಿ ಪಡೆದ ಸರಕು ಸಾಗಣೆ ವಾಹನಗಳಿಗೆ ಈ ಆದೇಶ ಅನ್ವಯವಾಗಲಿದೆ. ನವೆಂಬರ್ 10 ವಿ.ಎಲ್.ಟಿ. ಅಳವಡಿಸಲು ಕೊನೆಯ ಗಡುವು.

<><><>

ಅದೇ ರೀತಿ, ಅತೀ ಸುರಕ್ಷೆಯ ಎಚ್.ಎಸ್.ಆರ್.ಪಿ. ವಾಹನ ನೋಂದಣಿ ಫಲಕ ಅಳವಡಿಸಲು, ಸೆಪ್ಟೆಂಬರ್ 15 ಕೊನೆಯ ದಿನ ಎಂದು, ಸಾರಿಗೆ ಇಲಾಖೆ ತಿಳಿಸಿದೆ.

<><><>

ಧಾರವಾಡದ ವಾಲ್ಮಿ ಸಂಸ್ಥೆ, ಸುಸ್ಥಿರ ಜಲ ಮತ್ತು ನೆಲ ನಿರ್ವಹಣೆಯ ಕ್ಷೇತ್ರದಲ್ಲಿ, ದೇಶಕ್ಕೆ ಆಶಾಕಿರಣವಾದ ಸಂಸ್ಥೆ ಎಂದು, ಪುಣೆಯ ರಾಷ್ಟ್ರೀಯ ಜಲ ಅಕಾದೆಮಿ ನಿರ್ದೇಶಕ ಮಿಲಿಂದ ಪಾನಪಾಟೀಲ, ಶ್ಲಾಘಿಸಿದ್ದಾರೆ. 39ನೇ ವಾಲ್ಮಿ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸಿ, ಅವರು ಮಾತನಾಡಿದರು. ವಾಲ್ಮಿ ನಿರ್ದೇಶಕ ಡಾಕ್ಟರ್ ರಾಜೇಂದ್ರ ಪೋದ್ದಾರ ಅವರು ಮಾತನಾಡಿ, ರಾಜ್ಯ ಸರ್ಕಾರ ಧಾರವಾಡ ವಾಲ್ಮಿ ಸಂಸ್ಥೆಯನ್ನು, ಜಲ ನಿರ್ವಹಣೆಯಲ್ಲಿ ಉನ್ನತ ಕೇಂದ್ರ – ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ವಾಟರ್ ಮ್ಯಾನೇಜ್‌ಮೆಂಟ್ ಎಂದು ಘೋಷಿಸಿದ್ದಾಗಿ, ತಿಳಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕೊಡಗು ಜಿಲ್ಲೆ, ಗೋಣಿಕೊಪ್ಪಲುವಿನಲ್ಲಿ ಹಳೇ ಹೊಟೇಲ್ ಕಟ್ಟಡವೊಂದು ಕುಸಿದು, ಒಳಗಡೆ ಸಿಲುಕಿದ್ದ 8 ಜನ ಪ್ರಾಣಾಪಾಯದಿಂದ ಪಾರಾಗಿದ್ದಾರೆ, ಎಂದು ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ತಿಳಿಸಿದ್ದಾರೆ.

<><><>

ಟೀಂ ಇಂಡಿಯಾದ ಮಾಜಿ ಕ್ರಿಕೆಟಿಗ, ಅರಸೀಕೆರೆ ಮೂಲದ ಡೇವಿಡ್ ಜಾನ್ಸನ್ ಅವರ ಅಕಾಲಿಕ ನಿಧನದಿಂದ, ನೋವಾಗಿದೆ ಎಂದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂತಾಪ ಸೂಚಿಸಿದ್ದಾರೆ.

<><><>

ನಾಳೆಯಿಂದ 24ರ ವರೆಗೆ, ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ, ಭಾರೀ ಮಳೆಯಾಗುವ ಸಾಧ್ಯತೆಯಿದೆ. ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಉತ್ತರ ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಿಗೆ ಆರೇಂಜ್ ಅಲರ್ಟ್ ಪ್ರಕಟಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಸ್ವಂತಕ್ಕಾಗಿ ಹಾಗೂ ಸಮಾಜಕ್ಕಾಗಿ ಯೋಗ'; ಧ್ಯೇಯದಡಿ, 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸಂಪನ್ನ.
- ತುಂಗಭದ್ರಾ ಜಲಾಶಯದ ಹೂಳಿನ ಸಮಸ್ಯೆ ಪರಿಹರಿಸಲು, ಆಂಧ್ರ ಮತ್ತು ತಮಿಳುನಾಡು ಮುಖ್ಯಮಂತ್ರಿಗಳ ಜೊತೆ, ಶೀಘ್ರ ಚರ್ಚೆ – ಸಿದ್ದರಾಮಯ್ಯ.
- ಪರಿಶಿಷ್ಟ ಸಮುದಾಯಗಳ ಹಕ್ಕು ರಕ್ಷಣೆಗಾಗಿ, 33 ವಿಶೇಷ ಪೊಲೀಸ್ ಠಾಣೆಗಳು ಅಸ್ತಿತ್ವಕ್ಕೆ – ಸಚಿವ ಎಚ್.ಕೆ.ಪಾಟೀಲ.
- ಮಹಿಳೆ ಮತ್ತು ಮಕ್ಕಳ ಸುರಕ್ಷತೆ; ವಿ.ಎಲ್.ಟಿ. ಉಪಕರಣ ಮತ್ತು ಪ್ಯಾನಿಕ್ ಬಟನ್ ಅಳವಡಿಕೆಗೆ, ಅಂತಿಮ ದಿನಾಂಕ ನವೆಂಬರ್ 10.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><> ಹರ್ಷ